– –                    ಪಿ ಸಿ ಆರ್ **ನಂಃ 55/2025**

ಪಿ.ಡಬ್ಲ್ಯೂಃ 01 (ನಾರಾಯಣಮ್ಮ)

**ದಿನಾಂಕಃ 04.06.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಸತ್ಯಾಪಣೆ ಹೇಳಿಕೆ : ಶ್ರೀ ಎಸ್ ಯು ಎಸ್., ಪಿರ್ಯಾದಿದಾರರ ಪರ ವಕೀಲರಿಂದ

ನನಗೆ ಮತ್ತು ನನ್ನ ಮಗನಿಗೆ ಚಪ್ಪಲಿಯಿಂದ ಹೊಡೆಯುವಾಗ ಅಕ್ಕಪಕ್ಕದ ಜನರು ಬಿಡಿಸಿ ನಮ್ಮನ್ನು ಅಲ್ಲಿಂದ ಕಳುಹಿಸಿರುತ್ತಾರೆ. ನಂತರ ನಾನು ಹಾಗೂ ನನ್ನ ಮಗ ಸರ್ಕಾರಿ ಆಸ್ಪತ್ರೆ ಮುಳಬಾಗಿಲಿಗೆ ಬಂದು ದಾಖಲಾಗಿರುತ್ತೇವೆ. ದಿ. 01.10.2025 ರಂದು ಮುಳಬಾಗಿಲು ಗ್ರಾಮಾಂತರ ಪೋಲಿಸ್ ಠಾಣೆಗೆ ಬಂದು ದೂರನ್ನು ಕೊಟ್ಟಿದ್ದು, ಪೋಲಿಸರು ದಾಖಲಿಸಿಕೊಳ್ಳಲಿಲ್ಲ. ದಿ. 16.10.2025 ರಂದು ಕೋಲಾರ ಎಸ್ ಪಿ ಕಚೇರಿಗೆ ಹೋಗಿ ಪುನಃ ದೂರನ್ನು ಕೊಟ್ಟಿರುತ್ತೇನೆ. ಎಸ್ ಪಿ ಕಚೇರಿಯಿಂದ ಆರೋಪಿ ಸುರೇಶ್ ಬಾಬು ರವರಿಗೆ ಫೋನ್ ಮಾಡಿ ಬರಲು ತಿಳಿಸಿದರು ಕೂಡ ಅವರು ಅಲ್ಲಿಗೆ ಹೋಗಿರುವುದಿಲ್ಲ.

ಅವರದ್ದು ಒಂದೇ ಒಂದು ಹಠ ಏನೆಂದರೆ ನನ್ನ ಮಗ ಬೆಂಗಳೂರಿನಲ್ಲಿ ಬಾಡಿಗೆ ಮನೆ ಮಾಡಬೇಕು, ಊರಿಗೆ ಬಂದು ಸಂಸಾರ ಮಾಡುವುದಿಲ್ಲ, ನನ್ನ ಮಗಳ ಕಂಡಿಷನ್ ಕೇಳಿಲ್ಲ ಎಂದರೆ ನಿಮ್ಮ 4 ಜನರ ಪೈಕಿ ಯಾರಾನ್ನಾದರೂ ಸಾಯಿಸುತ್ತೇನೆಂದು ಬೆದರಿಕೆ ಹಾಕುತ್ತಾರೆ. ನಿಮ್ಮ ಮನೆಗೆ ಬೀಗ ಹಾಕಿಸುತ್ತೇನೆ, ಆಸ್ತಿಯಲ್ಲಿ ಭಾಗ ತೆಗೆಸುತ್ತೇನೆಂದು ಗಲಾಟೆ ಮಾಡುತ್ತಾರೆ. ಆರೋಪಿ ಸುರೇಶ್ ಬಾಬು ಯಾವಾಗಲೂ ರಾತ್ರಿ ಹೊತ್ತು ಬಂದು ಗಲಾಟೆ ಮಾಡುತ್ತಾರೆ.

ನನ್ನ ಸೊಸೆ ಯಾವಾಗಲೂ ನಾನು ಪಿಲಂ ಮಾಡಬೇಕು, ಮಕ್ಕಳಾದರೆ ಗ್ಲಾಮರ್ ಹೊರಟು ಹೋಗುತ್ತದೆ ಎಂದು ಜಗಳ ಮಾಡುತ್ತಿದ್ದರು. ನಮ್ಮ ಮನೆ ಊರಿನಿಂದ ಸ್ವಲ್ಪ ಹೊರಗಡೆ ಇದ್ದು, ಯಾವಾಗಲೂ ಬಂದು ಗಲಾಟೆ ಮಾಡುತ್ತಿರುತ್ತಾರೆ. ಆದ್ದರಿಂದ ನನಗೆ ನ್ಯಾಯಾ ಕೊಡಿಸಬೇಕೆಂದು ಈ ನ್ಯಾಯಾಲಯಕ್ಕೆ ಬಂದಿದ್ದೇನೆ.

ದಿ. 01.10.2025 ರ ಸ್ವೀಕೃತಿಯನ್ನು ನಿಪಿ–1 ಎಂದು, ಹೇಳಿಕೆ ದೂರಿನ ನಕಲನ್ನು ನಿಪಿ–2 ಎಂದು, ಛಾಯಾ ಚಿತ್ರಗಳನ್ನು ಹಾಗೂ ಸಿಡಿಯನ್ನು ನಿಪಿ–3 ಮತ್ತು 4 ಎಂದು, ದಿ. 16.10.2025 ರಂದು ಎಸ್ ಪಿ ಕಚೇರಿಗೆ ನೀಡಿರುವ ದೂರಿನ ಸ್ವೀಕೃತಿಯನ್ನು ನಿಪಿ–5 ಎಂದು, ಪಡಿತರ ಚೀಟಿ ಹಾಗೂ ಮೂಲ 3 ಆಧಾರ್ ಕಾರ್ಡ್‌ಗಳ ನೋಟರಿಕೃತ ಪ್ರತಿಗಳನ್ನು ನಿಪಿ–6 ರಿಂದ 9 ಎಂದು ಗುರುತಿಸಲಾಯಿತು.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇಳಿ ಕೇಳಿ ಸರಿ ಇದೆ.

(ಗೌಡ ಜಗದೀಶ ರುದ್ರೆ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮುಳಬಾಗಿಲು.